**ಪಾಠ 23**

## ಸಭೆ:

# ಅದರ ಸಂಗೀತ (1)

**ಹೊಸ ಒಡಂಬಡಿಕೆ**

1. **"ಕ್ರೈಸ್ತ" ಎಂಬ ಮಾತು ಯಾವ ಒಡಂಬಡಿಕೆಗೆ ಒಳಪಟ್ಟಿದೆ (ಅಪೊಸ್ತಲರ ಕೃತ್ಯಗಳು 11:26; 2 ಕೊರಿಂಥ 3:8)?**
2. **ಯಾವ ಒಡಂಬಡಿಕೆಗೆ ಸಭೆಯು ಒಳಪಟ್ಟಿರುತ್ತದೆ (ಮತ್ತಾಯ 16:18; ಅಪೊಸ್ತಲರ ಕೃತ್ಯಗಳು 20:28)?**
3. **ಹೊಸ ಒಡಂಬಡಿಕೆಯು ಯಾವಾಗ ಕಾರ್ಯಾಚರಣೆಯಲ್ಲಿ ಬಂದಿತು (ಇಬ್ರಿಯ 9:16, 17)?**
4. **ರೋಮಾಪುರದವರು ಧರ್ಮಶಾಸ್ತ್ರದ ಪಾಲಿಗೆ ಹೇಗೆ ಸತ್ತವರಾದರು (ರೋಮಾಪುರ 7:4)?**
5. **ಕ್ರೈಸ್ತರು ಕರ್ತನ ಸೇವೆ ಹೇಗೆ ಮಾಡುವರು? ಯಾಕೆ (ರೋಮಾಪುರ 7:6)?**
6. **ಧರ್ಮಶಾಸ್ತ್ರಕ್ಕೆ ಹಿಂದಿರುಗುವವದರ ಅಸಂಬದ್ಧತೆಯ ಬಗ್ಗೆ ಚರ್ಚಿಸಿರಿ (ರೋಮಾಪುರ 7:2, 3).**
   a. ಧರ್ಮಶಾಸ್ತ್ರಕ್ಕೆ ತಿರುಗುವಲ್ಲಿ ಯಾವ ಹಂಗು ಒಳಗೊಂಡಿದೆ (ಗಲಾತ್ಯ 5:3)?
   b. ಅಂಥ ಹೋಗುವಿಕೆಯು ಭಯಂಕರವಾದ ಪರಿಣಾಮವು ಏನಾಗಿರುವುದು (ಗಲಾತ್ಯ 5:4)?

**ಹೊಸ ಒಡಂಬಡಿಕೆಯ ಸಂಗೀತ**

1. **ಈ ಪರಿಚ್ಛೇದಗಳನ್ನು ಜಾಗರೂಕತೆಯಿಂದ ಓದಿರಿ:**
   a. "ಬಳಿಕ ಅವರು ಕೀರ್ತನೆಯನ್ನು *ಹಾಡಿ* ಎಣ್ಣೆಯ ಮರಗಳ ಗುಡ್ಡಕ್ಕೆ ಹೋದರು" (ಮತ್ತಾಯ 26:30; ಮಾರ್ಕ 14:26).
   b. "ಮಧ್ಯರಾತ್ರಿಯಲ್ಲಿ ಪೌಲನು ಸೀಲನೂ ಪ್ರಾರ್ಥನೆ ಮಾಡುವವರಾಗಿ ದೇವರಿಗೆ ಸ್ತೋತ್ರಪದಗಳನ್ನು *ಹಾಡುತ್ತಿದ್ದರು*, ಸೆರೆಯಲ್ಲಿದ್ದವರು ಲಕ್ಷ್ಯವಿಟ್ಟು ಕೇಳುತ್ತಿದ್ದರು" (ಅಪೊಸ್ತಲರ ಕೃತ್ಯಗಳು 16:25).
   c. "ಈ ಕಾರಣದಿಂದ ಅನ್ಯಜನಗಳ ಮಧ್ಯದಲ್ಲಿ ನಿನ್ನನ್ನು ಸ್ತುತಿಸುವೆನು; ನಿನ್ನ ನಾಮವನ್ನು ಸಂಕೀರ್ತಿಸುವೆನು" (ರೋಮಾಪುರ 15:9).
   d. "ಹಾಗಾದರೇನು? ನಾನು ಆತ್ಮದಿಂದ ಪ್ರಾರ್ಥಿಸುವೆನು, ಬುದ್ಧಿಯಿಂದಲೂ ಪ್ರಾರ್ಥಿಸುವೆನು; ಆತ್ಮದಿಂದ *ಹಾಡುವೆನು*, ಬುದ್ಧಿಯಿಂದಲೂ ಹಾಡುವೆನು" (1 ಕೊರಿಂಥ 14:15).
   e. "ಆದರೆ ಪರಿಶುದ್ಧಾತ್ಮ ಭರಿತರಾಗಿದ್ದು ಕೀರ್ತನೆಗಳಿಂದಲೂ ಆತ್ಮಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನ ಮಾಡತ್ತಾ ಕೀರ್ತನೆಗಳನ್ನು ಹಾಡಿರಿ" (ಎಫೆಸ 5:18, 19).
   f. "ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ; ಸಕಲ ಜ್ಞಾನದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು ಉಪದೇಶ ಮಾಡಿಕೊಳ್ಳಿರಿ,

ಬುದ್ಧಿ ಹೇಳಿಕೊಳ್ಳಿರಿ; ಕರ್ತನ ಕೃಪೆಯನ್ನು ನೆನೆಸಿಕೊಳ್ಳುವವರಾಗಿ ಕೀರ್ತನೆಗಳಿಂದಲೂ ಸಂಗೀತಗಳಿಂದಲೂ ಆತ್ಮ ಸಂಬಂಧವಾದ ಹಾಡುಗಳಿಂದಲೂ ನಿಮ್ಮ ಹೃದಯಗಳಲ್ಲಿ ದೇವರಿಗೆ *ಗಾನಮಾಡಿರಿ*" (ಕೊಲೊಸ್ಸೆ 3:16).

g. "ನಿನ್ನ ನಾಮ ಮಹಿಮೆಯನ್ನು ನನ್ನ ಸಹೋದರರನಿಗೆ ತಿಳಿಸುವೆನು; ಸಭಾ ಮಧ್ಯದಲ್ಲಿ ನಿನಗೆ ಸ್ತುತಿ ಪದಗಳನ್ನು *ಹಾಡುವೆನು*" (ಇಬ್ರಿಯ 2:12).

h. "ಆತನ ಮೂಲಕವಾಗಿಯೇ ದೇವರಿಗೆ ಸ್ತೋತ್ರ ಯಜ್ಞವನ್ನು ಎಡಬಿಡದೇ ಸಮರ್ಪಿಸೋಣ. ಆತನು ಕರ್ತನೆಂದು ಬಾಯಿಂದ ಪ್ರತಿಜ್ಞೆ ಮಾಡುವುದೇ ನಾವು ಅರ್ಪಿಸುವ ಯಜ್ಞವಾಗಿದೆ" (ಇಬ್ರಿಯ 13:15).

i. "ನಿಮ್ಮಲ್ಲಿ ಬಾಧೆಪಡುವವನು ಇದ್ದಾನೋ? ಅವನು ದೇವರನ್ನು ಪ್ರಾರ್ಥಿಸಲಿ. ನಿಮ್ಮಲ್ಲಿ ಸಂತೋಷಪಡುವವನು ಇದ್ದಾನೋ? ಅವನು ಕೀರ್ತನೆ *ಹಾಡಲಿ*" (ಯಾಕೋಬ 5:13).

**ಉಲ್ಲೇಖಗಳ ಮೇಲೆ ಪ್ರಶ್ನೆಗಳು**

**1. ಎಷ್ಟು ರೀತಿಯ ಸಂಗೀತಗಳಿವೆ?**
ವಾದ್ಯಸಂಗೀತ ಮತ್ತು ಬಾಯಿಂದ ಹಾಡುವ.

**2. ಇಲ್ಲಿ ಕೊಡಲ್ಪಟ್ಟ ಪ್ರತಿಯೊಂದು ಉಲ್ಲೇಖದಲ್ಲಿ, ಯಾವ ರೀತಿಯ ಸಂಗೀತ ಹೇಳಲ್ಪಟ್ಟಿದೆ?**

**3. ಯೇಸು ಮತ್ತು ಆತನ ಶಿಷ್ಯರು ದೇವರಿಗೆ ಸ್ತೋತ್ರ ಮಾಡುವದರಲ್ಲಿ ಹೇಗೆ ಸಂಗೀತ ಮಾಡಿದರು?**

**4. ಪ್ರಸಂಗಿಗಳು, ಪೌಲ ಮತ್ತು ಸೀಲರು ತಮ್ಮ ಭಾವನೆಗಳನ್ನು ಹೇಗೆ ವ್ಯಕ್ತಪಡಿಸಿದರು?**

**5. ಎಫೆಸದವರಿಗೆ ಮತ್ತು ಕೊಲೊಸ್ಸೆಯವರಿಗೆ ಏನು ಮಾಡಬೇಕೆಂದು ಪೌಲನು ಹೇಳಿದನು?**

**6. ಕೀರ್ತನೆಗಳಿಂದ, ಸಂಗೀತಗಳಿಂದ ಮತ್ತು ಆತ್ಮ ಸಂಬಂಧವಾದ ಹಾಡುಗಳಿಂದ ಏನು ಮಾಡಬೇಕು?**

**7. ಯೇಸುವು ಶಿಷ್ಯರನ್ನು ಅವರ ಕೆಲಸದಲ್ಲಿ ಯಾವುದಕ್ಕೆ ಮಿತಿಗೊಳಿಸಿದನು (ಮತ್ತಾಯ 28:20)?**

**8. ಕ್ರಿಸ್ತನ ಬೋಧನೆಯನ್ನು ಒಬ್ಬನು ದಾಟಿಹೋದರೆ ಏನು (2 ಯೋಹಾನ 9)?**

**9. ಒಬ್ಬನು ಹೊಸ ಒಡಂಬಡಿಕೆಯಿಂದ ತೆಗೆದು ಹಾಕಿದರೆ ಇಲ್ಲವೇ ಅದಕ್ಕೆ ಕೂಡಿಸಿದರೆ ಏನು (ಪ್ರಕಟನೆ 22:18, 19)?**

**10. ಕ್ರಿಸ್ತನ ಬೋಧನೆಯನ್ನು ದಾಟಿಹೋಗುವದರಿಂದ ಯಾವ ಕ್ರಯ ಕೊಡಬೇಕಾಗುವುದು (2 ಯೋಹಾನ 9ಎ)?**

a. ಬೋಧನೆಯಲ್ಲಿ ನೆಲೆಗೊಳ್ಳುವುದು, ಯಾವ ಆಶೀರ್ವಾದ (2 ಯೋಹಾನ 9ಬಿ)?

b. ಬೈಬಲಿಗೆ ಕೂಡಿಸುವ ಇಲ್ಲವೇ ಅದರಿಂದ ತೆಗೆದು ಹಾಕುವ ಮನಷ್ಯನ ಬಗ್ಗೆ ಏನು (ಪ್ರಕಟನೆ 22:18, 19)?

**11. ಯಾವ ರೀತಿಯ ಸಂಗೀತವನ್ನು ದೇವರು ಆಜ್ಞಾಪಿಸಿದನು (ಎಫೆಸ 5:19; ಕೊಲೊಸ್ಸೆ 3:16)?**

**12. ವಿಚಿತ್ರವಾದ ಬೆಂಕಿಯನ್ನು ಕರ್ತನಿಗೆ ಯಾರು ಅರ್ಪಿಸಿದರು (ಯಾಜಕಕಾಂಡ 10:1a)?**

a. ವಿಚಿತ್ರವಾದ ಬೆಂಕಿ ಯಾವುದು (ಯಾಜಕಕಾಂಡ 10:1ಸಿ)?

b. ಈ ದುರಹಂಕಾರಕ್ಕಾಗಿ ಯಾವ ದಂಡನೆಯು ಕೊಡಲ್ಪಟ್ಟಿತು (ಯಾಜಕಕಾಂಡ 10:2)?

**13. ಪ್ರತಿಯೊಬ್ಬ ಕ್ರೈಸ್ತನು ಅವನ ಆರಾಧನೆಯಲ್ಲಿ ಹೇಗೆ ನಡಿಸಲ್ಪಡಬೇಕು (2 ಕೊರಿಂಥ 5:7)?**

**14. ದೇವರಿಗೆ ಆರಾಧನೆಯಲ್ಲಿ, ನಂಬಿಕೆಯಿಂದ ನಡಿಸಲ್ಪಡದಿದ್ದರೆ ಏನಾಗುವುದು (ರೋಮಾಪುರ 14:23)?**

**15. ಫಿಲಿಪ್ಪಿಯವರು ಏನು ಮಾಡಬೇಕಾಗಿತ್ತು (ಫಿಲಿಪ್ಪಿ 4:9)?**

a. ಪೌಲನು ಹಾಡುತ್ತಿದ್ದ ವೃತ್ತಾಂತ ಎಲ್ಲಿದೆ (ಅಪೊಸ್ತಲರ ಕೃತ್ಯಗಳು 16:25; 1 ಕೊರಿಂಥ 14:15)?

b. ಪೌಲನು ವಾದ್ಯವನ್ನು ಎಲ್ಲಿ ಬಾರಿಸಿದನು ಇಲ್ಲವೇ ಅದನ್ನು ಆಜ್ಞಾಪಿಸಿದನು?

© 2009 Truth for Today